**<u>ದಿನಾಂಕ 07.08.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀಸವಾಲುಃ ಎದುರುದಾರರ ಪರ ಶ್ರೀ ಎಸ್ ಬಿ ಡಿ ವಕೀಲರಿಂದಃ</u>**

ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿ ತಯಾರು ಮಾಡಿಸಿರುತ್ತೇನೆ. ಮಗು ಜನನವಾದ ನಂತರ 4 ವರೆ ವರ್ಷಗಳ ಕಾಲ ಮಗುವಿನ ಜೊತೆ ಇದ್ದೆನು. ಅರ್ಜಿಯನ್ನು ದಾಖಲು ಮಾಡಿದಾಗ ಮಗುವಿಗೆ 4 ವರೆ ವರ್ಷಗಳು ಆಗಿತ್ತು. ಅರ್ಜಿಯನ್ನು ದಾಖಲು ಮಾಡಿದಾಗ ಮಗುವಿಗೆ 6-7 ವರ್ಷಗಳು ಆಗಿತ್ತು ಎಂದರೆ ಸುಳ್ಳು. ಮಗುವನ್ನು ಅಂಗನವಾಡಿಗೆ 2018 ರಲ್ಲಿ ಸೇರಿಸಿದ್ದೆವು. ಅರ್ಜಿಯನ್ನು ದಾಖಲು ಮಾಡಿದಾಗ ಮಗುವಿಗೆ 4 ವರೆ ವರ್ಷಗಳು ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ಮಗುವನ್ನು ಅಂಗನವಾಡಿಗೆ 2018 ರಲ್ಲಿ ಸೇರಿಸಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ವೈವಾಹಿಕ ಜೀವನದಲ್ಲಿ ಕಲಹ ಉಂಟಾಗಿತ್ತು ಎಂದರೆ ನಿಜ. ಪಂಚಾಯತಿಯಲ್ಲಿ ವೈವಾಹಿಕ ಜೀವನ ನಡೆಸಲು ತಿಳಿಸಿದ್ದರು ಎಂದರೆ ಸುಳ್ಳು. ನನ್ನ ಒತ್ತಾಯದ ಮೇರೆಗೆ ಪಂಚಾಯತಿಯಲ್ಲಿ ನಮ್ಮನ್ನು ಬೇರೆ ಮನೆಯಲ್ಲಿರಿಸಿದ್ದರು ಎಂದರೆ ಸುಳ್ಳು. ಆಗ ನಾನು ಸ್ವಂತ ಮನೆ ಕಟ್ಟಿಕೊಡಲು ಎದುರುದಾರರಿಗೆ ಒತ್ತಾಯ ಮಾಡಿದಾಗ ಕಟ್ಟಿಸಿಕೊಟ್ಟರು ಎಂದರೆ ಸುಳ್ಳು.ನನಗೆ ಬಂಗಾರದ ಮೇಲೆ ವ್ಯಾಮೋಹ ಇದ್ದುದ್ದರಿಂದ ಎದುರುದಾರರು 450 ಗ್ರಾಂ ಬಂಗಾರದ ಆಭರಣ ಮಾಡಿಸಿಕೊಟ್ಟರು ಎಂದರೆ ಸುಳ್ಳು. ಗೃಹಪ್ರವೇಶಕ್ಕೆ ಎದುರುದಾರರ ಪೋಷಕರು ಬಂದಾಗ ಅವರನ್ನು ನಾನು ಅವಮಾನಿಸಿದೆನು ಎಂದರೆ ಸುಳ್ಳು. ನಾನೇ ಎದುರುದಾರರ ಮೇಲೆ ಜಗಳ ತೆಗೆದು ಮನೆಯಲ್ಲಿದ್ದ 10 ಲಕ್ಷ ಮತ್ತು 450 ಗ್ರಾಂ ಬಂಗಾರದ ಒಡವೆಗಳನ್ನು ತೆಗೆದುಕೊಂಡು, ಮಗುವನ್ನು ಎದುರುದಾರರ ಜೊತೆ ಬಿಟ್ಟು ತವರು ಮನೆಗೆ ಹೋದೆನು ಎಂದರೆ ಸುಳ್ಳು. ಈ ಬಗ್ಗೆ ಚನ್ನಪಟ್ಟಣ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಎಂದರೆ ಸಾಕ್ಷಿಯು ನಾವು ಸಹ ಹೇಳಿಕೆ ಕೊಟ್ಟಿರುತ್ತೇವೆಂದು ನುಡಿಯುತ್ತಾರೆ. ನಾನು ವಿಲಾಸಿ ಜೀವನಕ್ಕೆ ಮಾರುಹೋಗಿ ಮಗುವನ್ನು ಎದುರುದಾರರ ಬಳಿ ಬಿಟ್ಟು ಸಾಂತ್ವನ ಕೇಂದ್ರಕ್ಕೆ ಸೇರಿಸಲು ಹೇಳಿದ್ದೆನು ಎಂದರೆ ಸುಳ್ಳು. ಆಗ ಎದುರುದಾರರು ವಿವಾಹ ವಿಚ್ಚೇದನಾ ಕೋರಿ ಎಂ ಸಿ ಸಂಖ್ಯೆ 23/2021 ರಂತೆ ಅರ್ಜಿ ಸಲ್ಲಿಸಿದ್ದಾರೆಂದರೆ ನಿಜ. ನಂತರ ನಾನು ಚನ್ನಪಟ್ಟಣ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಎದುರುದಾರರ ವಿರುದ್ದ ವರದಕ್ಷಿಣೆ ಕಿರುಕರಳ ಪ್ರಕರಣ ದಾಖಲು ಮಾಡಿದೆನು ಎಂದರೆ ನಿಜ. ನನಗೆ ಮಗುವಿನ ಮೇಲೆ ಪ್ರೀತಿ ವಾತ್ಸಲ್ಯ ಇಲ್ಲದೇ ಇದ್ದರೂ ಎದುರುದಾರರಿಗೆ ಮತ್ತು ಅವರ ಪೋಷಕರಿಗೆ ತೊಂದರೆ

ಕೊಡಲು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆಂದರೆ ಸುಳ್ಳು. ಪ್ರಸ್ತುತ ಅರ್ಜಿ ದಾಖಲು ಮಾಡುವ ಮೊದಲು 2 ಸಲ ಮಗುವನ್ನು ಭೇಟಿ ಮಾಡಿರುತ್ತೇನೆ ನಂತರ ಎದುರುದಾರರು ಮಗುವನ್ನು ಶಾಲನೆಯಿಂದ ಬಿಡಿಸಿರುತ್ತಾರೆ. ಮಗುವಿನ ಉಜ್ವಲ ಭವಿಷ್ಯದ ಬಗ್ಗೆ ನನಗೆ ಆಸಕ್ತಿ ಇಲ್ಲ ಎಂದರೆ ಸುಳ್ಳು. ಜೀವನಾಂಶವನ್ನು ಪಡೆಯಲು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತೇನೆಂದರೆ ಸುಳ್ಳು. ಎದುರುದಾರರು ಮಗುವಿಗೆ ಒಳ್ಳೆಯ ಶಿಕ್ಷಣ ಕೊಡಿಸುತ್ತಿದ್ದಾರೆಂದರೆ ಸುಳ್ಳು. ಮಗು ನನ್ನಬಳಿ ಬರಲು ಇಚ್ಛೆ ಇಲ್ಲ ಎಂದರೆ ಸುಳ್ಳು. ನಾನು ಯಾವುದೇ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

**ಓ ಹೇ ಕೇ ಸ ಒ**

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**